ವಿವರವಾಗಿ ಮಾಡುತ್ತಿದ್ದರು. ಪೂಜೆ ಮಾಡಿ ತಿಂಡಿ ತಿನ್ನುವವರೆಗೆ ಅವರು ಯಾರನ್ನೂ ಮುಟ್ಟುತ್ತಿರಲಿಲ್ಲ. ನೃತ್ಯ ಮತ್ತು ಅಭಿನಯದ ಬಗ್ಗೆ ಅಷ್ಟೊಂದು ವಿವರವಾದ ಪಾಠ ಹೇಳಿಕೊಡುತ್ತಿದ್ದರು. ಅಭಿನಯ ಎಂದರೆ ಅದು ಭಾಷೆಗಿಂತಲೂ ಮಿಗಿಲಾಗಿ ಸ್ಪಷ್ಟವಾಗಿ ಅರ್ಥವಾಗುವಂತಿರಬೇಕು. ಭಾಷೆ ಗೊತ್ತಿಲ್ಲದ ಯಾವ ಊರಿಗೆ ಹೋದರೂ, ನಾವು ಪ್ರಸ್ತುತಪಡಿಸುವ ನೃತ್ಯವು ಪಂಡಿತರಿಗೆ ಜ್ಞಾನಿಗಳಿಗಷ್ಟೇ ಅರ್ಥವಾಗುವಂತೆ ಸಾಂಕೇತಿಕವಾಗಿ ಇದ್ದರೆ ಸಾಲದು, ಜನಸಾಮಾನ್ಯರಿಗೆ ಅರ್ಥವಾಗುವಂತಿರಬೇಕು ಎಂದು ಹೇಳಿಕೊಟ್ಟರು.

ದೇವಸ್ಥಾನದಲ್ಲಿ ದೇವರಿಗೆ ದೇವದಾಸಿಯರು ಸಲ್ಲಿಸುವ ನೃತ್ಯ ಸೇವೆಯನ್ನು 'ದೇವಾಲಯ ನೃತ್ಯ' ಎಂದು ಹೇಳುವುದು ವಾಡಿಕೆ. ಚಾಮರಸನ 'ಪ್ರಭುಲಿಂಗ ಲೀಲೆ'ಯಲ್ಲಿ ಮಾಯಾದೇವಿ ಎಂಬ ದೇವದಾಸಿ ಈ ನೃತ್ಯ ಸೇವೆ ಸಲ್ಲಿಸುವ ವಿವರವಾದ ಚಿತ್ರಣವಿದೆ. ದೇವಾಲಯ ನೃತ್ಯದಲ್ಲಿ ಮುಖ್ಯವಾಗಿ ಮೂರು ಭಾಗಗಳಿವೆ. ಮೊದಲನೆಯದ್ದು, 'ಷೋಡಶೋಪಚಾರ ಪೂಜಾ ಕರ್ಮ', ಎರಡನೆಯದು 'ಕೇಳಿಕಾ ಭಾಗ' ಮತ್ತು ಮೂರನೆಯದ್ದು 'ಭಾಗವತ ಮೇಳ'. ಈ ನೃತ್ಯ ಪ್ರಕಾರವನ್ನು ದೇವಾಲಯ ನೃತ್ಯ ಎಂಬ ಹೆಸರಿನಿಂದ ಆಗೆಲ್ಲ ಗುರುತಿಸುತ್ತಿರಲಿಲ್ಲ. ಇದು ಸಾತ್ವಿಕ ಅಭಿನಯ ಪ್ರಧಾನವಾದ ನೃತ್ಯವಷ್ಟೇ. ಕಾರ್ಯಾಗಾರದಲ್ಲಿ ಆರು ತಿಂಗಳ ನಮಗೆ ಕಠಿಣವಾದ ಅಭ್ಯಾಸ ಮಾಡಿಸಿದ್ದರು.

**◆ ದೇವಾಲಯ ನೃತ್ಯದಲ್ಲಿ ಇರುವ ವಿವಿಧ ಹಂತಗಳು ಯಾವುವು?**

ಮೊದಲನೆಯ ಭಾಗ 'ಷೋಡಶೋಪಚಾರ'ವನ್ನು ಅರ್ಚಕರು ಹೇಳುವ ಮಂತ್ರಕ್ಕೆ ಅನುಗುಣವಾಗಿ, ದೇವದಾಸಿಯು ವೇದಿಕೆಯಲ್ಲಿ ಪ್ರಸ್ತುತಪಡಿಸುತ್ತಾಳೆ. ರಂಗಭೋಗದೊಂದಿಗೆ ಈ ಪ್ರಸ್ತುತಿ ಆರಂಭವಾಗುವುದು. ದೇವಸ್ಥಾನದ ಮುಖ್ಯಸ್ಥರು ಅಥವಾ ಊರಿನ ಪಟೇಲರು, ಫಲತಾಂಬೂಲ ನೀಡಿ, ದೇವರಿಗೆ ಷೋಡಶೋಪಚಾರ ಪೂಜೆ ಅರ್ಪಿಸುವಂತೆ ಮೊತ್ತ ಮೊದಲನೆಯದಾಗಿ ಆಹ್ವಾನ ನೀಡುತ್ತಾರೆ. ಅದನ್ನು ಸ್ವೀಕರಿಸುವ ದೇವದಾಸಿ, ಕಟ್ಟೆಪೂಜೆ ಅಥವ ಅರಳೀಮರದ ಕಟ್ಟೆಯಲ್ಲಿ ಪೂಜೆಯನ್ನು ನೆರವೇರಿಸಿ, ದೇವಾಲಯದ ಆವರಣದಲ್ಲಿರುವ ನಾಗಾರಾಧನೆಯನ್ನು ಮಾಡುತ್ತಾಳೆ. ಅನಂತರ ಭೇರಿ, ನಗಾರಿ, ಕೊಂಬು, ಕಹಳೆ ಮುಂತಾದ ದೇವಾಲಯದ ವಾದ್ಯ ವೃಂದ ಮತ್ತು ವೇದ ಘೋಷಗಳೊಂದಿಗೆ ಆಕೆ ದೇವಸ್ಥಾನವನ್ನು ಪ್ರವೇಶಿಸುತ್ತಾಳೆ. ಇದರೊಂದಿಗೆ ದೇವದಾಸಿ ನೃತ್ಯ ಆರಂಭವಾಗುತ್ತದೆ. ಪ್ರಾಕಾರದ ಬಲ ಭಾಗದಿಂದ ಆರಂಭಿಸುವ ನೃತ್ಯವು, ಎಂಟು ದಿಕ್ಕುಗಳನ್ನು ಸಂಕೇತಿಸುವ ಬಲಿಕಲ್ಲುಗಳಿಗೆ ನೃತ್ಯಪೂಜೆ ಸಲ್ಲಿಸುತ್ತಾ ಆಕೆ ಮುಂದುವರೆಯುತ್ತಾಳೆ. ಪ್ರತಿಯೊಂದು ದೇವತೆಗೂ ಮೀಸಲಾದ ಪ್ರತ್ಯೇಕ ರಾಗ ತಾಳಗಳು ಇವೆ. ಹೀಗೆ ಎಲ್ಲ ದಿಕ್ಕುಗಳ ದೇವತೆಗಳನ್ನು ಸಂಪ್ರೀತಿಗೊಳಿಸಿದ ಬಳಿಕ ಕುಂಭ ಪ್ರತಿಷ್ಠಾಪನೆ ಮಾಡಿ, ಕುಂಭಾರತಿ ಮತ್ತು ಚೂರ್ಣಿಕ ಸೇವೆ ಸಲ್ಲಿಸುತ್ತಾಳೆ. ಇಷ್ಟೆಲ್ಲ ಮುಕ್ತಾಯವಾದ ಬಳಿಕ ಆಕೆ 'ವಿನಾಯಕ ಕೌತ್ವ'ವನ್ನು ಪ್ರಸ್ತುತಪಡಿಸಬೇಕು. ಹೀಗೆ ಷೋಡಶೋಪಚಾರವನ್ನು ನವಸಂಧಿ ಅಥವಾ ಪೂರ್ವ ರಂಗ ಎಂದೂ ಕರೆಯಲಾಗುತ್ತದೆ. ಎರಡನೇ ಹಂತದಲ್ಲಿ 'ಕೇಳಿಕೆ' ಶುರುವಾಗುತ್ತದೆ. ಶಿವ ಕೈವಾರ, ವಿಷ್ಣು ಕೈವಾರ, ದೇವಿ ಕೈವಾರ ಮತ್ತು ಅಧ್ಯಾತ್ಮ ರಾಮಾಯಣಗಳನ್ನು ಭಕ್ತರ ಜ್ಞಾನ ವೃದ್ಧಿಗಾಗಿ ಪ್ರಸ್ತುತಪಡಿಸಲಾಗುತ್ತದೆ. ಅಲ್ಲಿಯವರೆಗೆ, ದೇವದಾಸಿಯು ಎಲ್ಲ ಸೇವೆಯನ್ನು ದೇವರಿಗಾಗಿ ಸಲ್ಲಿಸುತ್ತಾಳೆ. ಇಡೀ ದೇವಾಲಯ ನೃತ್ಯದಲ್ಲಿ ಎಲ್ಲಿಯೂ ಶೃಂಗಾರ ರಸ ಇರಲೇಬಾರದು. ವಸ್ತ್ರ ಆಭರಣವೂ ಗೌರವಪೂರ್ಣವಾಗಿರಬೇಕು. ಬೆಳ್ಳನೆಯ ಸೀರೆಯನ್ನು ಉಡಬೇಕು. ಈ ನೃತ್ಯ ಸೇವೆಯು ಎಷ್ಟೊಂದು ಭಕ್ತಿಪೂರ್ವಕವಾಗಿತ್ತು ಎಂಬುದನ್ನು ಅರಿತು ನನಗೆ ದೊರೆತ ಜ್ಞಾನದ ಬಗ್ಗೆ ಗೌರವವೂ ಹೆಚ್ಚಾಯಿತು. ಎಲ್ಲಿಯವರೆಗೆ ಎಂದರೆ, ದೇವಾಲಯದ ಪ್ರಾಕಾರದ ನೃತ್ಯ ಸೇವೆಗಳು ಮುಗಿದ ನಂತರ ರಾತ್ರಿ ದೇವರೊಡನೆ ಶಯನಸೇವೆಯನ್ನು ಮಾಡುವ ಅವಕಾಶವೂ ದೇವದಾಸಿಗೆ ಇತ್ತಂತೆ. ಅದಕ್ಕಾಗಿ ಗರ್ಭಗುಡಿಯಲ್ಲಿ ಹಾಲು ಹಣ್ಣು, ಶಯನಕ್ಕಾಗಿ ಮಂಚ ಮುಂತಾದ ವ್ಯವಸ್ಥೆಗಳನ್ನು ಕಲ್ಪಿಸುತ್ತಿದ್ದರು. ಈಗಲೂ ಚಿದಂಬರಂ ದೇವಸ್ಥಾನದಲ್ಲಿ ಈ ಆಚರಣೆ ಇದೆಯಂತೆ.

**◆ ಕಾರ್ಯಾಗಾರದ ಕೊನೆಯಲ್ಲಿ ನೀವು ನೃತ್ಯ ಪ್ರದರ್ಶನ ನೀಡಿದ್ದಿರಾ?**